ಕಳೆದುಹೋಗಿತ್ತು. ಖಾಲಿಖಾಲಿ ಅನ್ನಿಸಿ ಉದ್ವಿಗ್ನನಾದ. ಯಾರ್ಯಾರ ಮೇಲೋ ಸಿಟ್ಟು ಬರತೊಡಗಿ ಎದ್ದು ಸೀದಾ ಬಾರಿಗೆ ಹೋಗಿ ಒಂದು ನೈಂಟಿ ಹಾಕಿದ. ಚಡಪಡಿಕೆ ಹೆಚ್ಚಾಯ್ತೇ ವಿನಃ ಕಡಿಮೆಯಾಗಲಿಲ್ಲ. ರೂಮಿಗೆ ಬಂದು ಆ ಉಂಗುರ ತೆಗೆದು ಅದರಮೇಲೆ ಉಗುಳಿದ. ಮಂಚದ ಮೇಲೆ ಎಷ್ಟೋಹೊತ್ತು ಬಿದ್ದುಕೊಂಡಿದ್ದವನಿಗೆ ಎಲ್ಲೋ ಕೇಳಿದ್ದು ನೆನಪಾಯ್ತು. ಎದ್ದು ಕಂಪ್ಯೂಟರು ಆನ್ ಮಾಡಿ ಹುಡುಕುತ್ತ ಹೋದ. ಕರ್ಸರ್ ಸರಿಯುತ್ತಿದ್ದಂತೆ ಅದು ಬಂತು. ಒಂದೆಡೆ ನಿಂತ. '...ನಾನು ಎಂಜಿನಿಯರಿಂಗ್ ಓದಿಕೊಂಡ... ಕುಟುಂಬದಿಂದ ಹೊರಬರಲು ಇಚ್ಛೆ ಇರುವ, ಸ್ಟ್ರೇಟ್ ಫಾರ್ವರ್ಡ್ ಹುಡುಗಿ...'

ಒಂದು ನಿಮಿಷ ಯೋಚಿಸುತ್ತ ಕುಳಿತವ ಸಂದೇಶ ಕಳಿಸಿಬಿಟ್ಟ. ಒಂದು ಗಂಟೆ ಕಳೆದಮೇಲೆ ಅವಳಿಂದ ಮರುಸಂದೇಶ ಬಂತು. ತನ್ನ ಫೋಟೊ ಅಪ್ಲೋಡು ಮಾಡಿ, ತನ್ನ ವಿವರವನ್ನು ಅವಳಿಗೆ ರವಾನಿಸಿದ. ಮರುದಿನ ಮತ್ತೆ ಸಂಪರ್ಕಿಸಿದ ಅವಳು ಮತ್ತಷ್ಟು ವಿವರದೊಂದಿಗೆ ತನ್ನ ಫೋಟೊ ಕಳಿಸಿದಳು. ಸಂದೇಶ ಮರುಸಂದೇಶ ಹರಿದಾಡಿ ಭಾನುವಾರ ಭೆಟ್ಟಿಯಾಗುವ ಹಂತಕ್ಕೆ ಸಂಗತಿ ಬಂದುಬಿಟ್ಟಿತು. ಯಾವುದೋ ಹಟಕ್ಕೆ ಧನಂಜಯ ಅದೇ ಹೋಟೆಲಿನ ಅದೇ ಟೇಬಲನ್ನು ಮುಂಚಿತವಾಗಿ ಕಾಯ್ದಿರಿಸಿದ. ಕಾಯಿಸದೆ ಹೇಳಿದ ಸಮಯಕ್ಕೆ ಸರಿಯಾಗಿ ಆ ಟೇಬಲಿನತ್ತ ನಡೆದು ಬಂದವಳು 'ಹಲೋ, ನೈಸ್ ಟು ಮೀಟ್' ಅಂತ ಕೈಕುಲುಕಿ ಎದುರಿನ ಕುರ್ಚಿಯಲ್ಲಿ ಕುಳಿತಳು. ಸ್ವಲ್ಪ ಕಂದು ಬಣ್ಣ. ಎತ್ತರದ ಸಪೂರ ಮೈಕಟ್ಟು. ಕಣ್ಣುಗಳಲ್ಲಿ ಅದು ಧೈರ್ಯವೋ ಹಟವೋ, ಆದರೆ ಮುಖದಲ್ಲಿ ಆತ್ಮವಿಶ್ವಾಸ ಎದ್ದು ಕಾಣುತ್ತಿತ್ತು. ಟೊಮೆಟೊ ಸೂಪು ಮತ್ತೆ ಹಪ್ಪಳ ತರಿಸಿಕೊಂಡು ಊಟಕ್ಕೆ ಅರ್ಧ ಗಂಟೆ ಬಿಟ್ಟು ಬಾ ಅಂತ ವೇಟರನ್ನು ಕಳಿಸಿದ. ಅವಳೆ ಮಾತಿಗೆ ಸುರು ಮಾಡಿದಳು. ವಲ್ಲರಿ ನಿಜಕ್ಕು ಸ್ಟ್ರೇಟ್ ಫಾರ್ವರ್ಡಾಗಿದ್ದಳು. ಅವಳ ತಂದೆ ನೈವೇಲಿ ಲಿಗ್ನೈಟಿನಲ್ಲಿ ದೊಡ್ಡ ಹುದ್ದೆಯಲ್ಲಿದ್ದರು. ವಿದ್ಯೆ ಮತ್ತು ಖರ್ಚಿನ ವಿಷಯದಲ್ಲಿ ಧಾರಾಳಿ. ಆದರೆ ಮನೆಯ ಹಳೆಯ ಸಂಪ್ರದಾಯಸ್ಥ ವಾತಾವರಣಕ್ಕೆ ಅವಳು ಮೊದಲಿಂದಲೂ ವಿರೋಧಿ. ಸಾಲದ್ದಕ್ಕೆ ಸೋದರಮಾವನ ಮಗನೊಂದಿಗೆ ಮದುವೆ ಮಾಡಬೇಕೆಂಬ ಅವಳಮ್ಮನ ಮನದಾಸೆ ಉಸಿರು ಕಟ್ಟಿಸಿ ಅದನ್ನು ಮನಸಾ ದ್ವೇಷಿಸಿದಳು. ಎಂಜಿನಿಯರಿಂಗ್ ಕಲಿಯಲು ಚೆನ್ನೈ ಹಾಸ್ಟೆಲಿನಲ್ಲಿದ್ದಾಗ ತನಗೊಬ್ಬ ಬಾಯ್‌ಫ್ರೆಂಡಿದ್ದ ಅಂತ ಅವಳೆ ಹೇಳಿದಳು. ಆತ ಅತಿ ಪೊಸೆಸಿವ್ ಆಗಿದ್ದಕ್ಕೆ ರೇಜಿಗೆ ಹುಟ್ಟಿಬಿಟ್ಟಿತ್ತು. ತಂದೆತಾಯಿಯಾಗಲಿ, ಬಾಯ್ ಫ್ರೆಂಡೆ ಆಗಲಿ, ಎಲ್ಲಿ ಹೋಗಿದ್ದೆ? ಇಷ್ಟು ಹೊತ್ನಲ್ಲಿ ಅಲ್ಯಾಕಿದ್ದೀಯ? ಅಂತೆಲ್ಲ ವಿಚಾರಿಸುವುದು ಉಸಿರು ಕಟ್ಟಿದಂತಾಗುತ್ತಿತ್ತು. ಅವಳು ಸ್ವಾತಂತ್ರ್ಯಪ್ರಿಯೆ. ಅವನನ್ನು ಕಳಚಿಕೊಂಡಳು. ಮತ್ತೂ ಹಿಂದೆ ಬಿದ್ದವನನ್ನು ರಸ್ತೆಯಲ್ಲಿ ಕಾಲರು ಹಿಡಿದಳು. ಹಾಗಂತ ತಾನೇನು ಕನ್ಯೆಯಲ್ಲ, ಕಳಕೊಳ್ಳಕ್ಕೆ ಅದರಲ್ಲೇನಿರುತ್ತೆ? ಗಂಡಸಿಗಿಲ್ಲದ್ದು ಹೆಣ್ಣಿಗೆ ಮಾತ್ರ ಯಾವುದದು ಸೋಕಾಲ್ಡ್ ವರ್ಜಿನಿಟಿ? ಅಂತ ತುಟಿ ಡೊಂಕು ಮಾಡಿದಳು. ಧನಂಜಯ ತನ್ನೂರು, ತಂದೆ ಚಿಕ್ಕಮ್ಮ ಎಲ್ಲ ವಿವರ ಹೇಳಿದ. ಎದುರಿಗಿದ್ದವಳ ಮುಖ, ತುಟಿಗಳನ್ನು ನೋಡುತ್ತ ಆವೇಶದಲ್ಲಿ ಬೀನಾಳ ಸಂಗತಿಯನ್ನೂ ಹೇಳಿ ಮುಗಿಸಿಬಿಟ್ಟ. 'ಹಾಗಂತ ಅಂತಹ ಸಂಬಂಧವೇ ಬೆಳೀಲಿಲ್ಲ, ನಾನು ವರ್ಜಿನ್' ಅಂತಲೂ ಸೇರಿಸಿದ. 'ವರ್ಜನಂ ನಾಶಕ್ಯಂ ಇತಿ ವರ್ಜಿನ್. ಅಂದರೆ ವರ್ಜಿಸಲು ಕಷ್ಟವಾಗದ್ದು, ಇದು ನಾನೇ ಕಟ್ಟಿದ್ದು!' ಅಂತ ನಕ್ಕಳು. ಬಿಡಿ ಅದು ನನ್ನ ಕನ್ಸರ್ನಲ್ಲವೆ ಅಲ್ಲ; ನಾನೇನು ಕೇಳಿದ್ನ? ಅಂದಳು. ಒಬ್ಬರಮೇಲೆ ಇನ್ನೊಬ್ಬರು ಅಭಿಪ್ರಾಯ ಹೇರಕೂಡದು, ಅವರ ಸ್ವಾತಂತ್ರ್ಯ ಅವರಿಗಿರ್ಬೇಕು. ಮನೆ ಬಾಡಿಗೆ, ಊಟ ತಿಂಡಿ